ಮಾರ್ಕಂಡೇಯ ಯೋಜನೆಯಲ್ಲಿ ಏತ ನೀರಾವರಿಗೆ ಸರ್ವೆ ಕೆಲಸ ಪ್ರಾರಂಭ

806 - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾರ್ಕಂಡೇಯ ಯೋಜನೆಯಡಿಯಲ್ಲಿ ಬೆಳಗಾಂವ ಜಿಲ್ಲೆ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನ ಗ್ರಾಮಗಳಾದ ಬೈಲಹೊಂಗಲ ತಾಲ್ಲೂಕಿನ ವಣ್ಣೂರ ಮಲ್ಲಾಪುರ, ಕೆ.ಎನ್. ಮಾಸ್ತಮರಡಿ, ನೇಸರಗಿ ಹಾಗೂ ಸವದತ್ತಿ ತಾಲ್ಲೂಕಿನ ಚಚಡಿ, ಹಾರುಗೊಪ್ಪ ಮುಗೋಡ ಗ್ರಾಮದ ಜಮೀನುಗಳಿಗೆ ಏತ ನೀರಾವರಿ ಯೋಜನೆಯ ಮೂಲಕ ನೀರು ಒದಗಿಸಲು ಸರ್ವೆ ಕೆಲಸ ಪ್ರಾರಂಭಿಸಲು ಆದೇಶ ನೀಡಿರುವುದು ನಿಜವೇ?*

ಆ) *ಹಾಗಿದ್ದಲ್ಲಿ, ಈ ಕಾರ್ಯ ಈಗ ಯಾವ ಹಂತದಲ್ಲಿದೆ?*

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಮಾರ್ಕಂಡೇಯ ಯೋಜನೆಯಲ್ಲಿ ಏತ ನೀರಾವರಿ ಯೋಜನೆ ಮೂಲಕ ಸೂಚಿಸಿರುವ ಗ್ರಾಮಗಳಿಗಾಗಲಿ ಅಥವಾ ಇತರೆ ಯಾವುದೇ ಗ್ರಾಮಗಳಿಗಾಗಿ ನೀರಾವರಿ ಕಲ್ಪಿಸುವ ಪ್ರಸ್ತಾವನೆಯೂ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ತುಂಗಭದ್ರಾ ಯೋಜನೆಗೆ ಹಣ ಬಿಡುಗಡೆ

819 - ಶ್ರೀ ಕರಡಿ ಸಂಗಪ್ಪ ಅಮರಪ್ಪ (ಕೊಪ್ಪಳ) : ಮಾನ್ಯ ಭಾರಿ ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *2000-2001ನೇ ಸಾಲಿನಲ್ಲಿ ತುಂಗಭದ್ರಾ ಯೋಜನೆಯನ್ನು ಸೇರಿಸಲಾಗುವುದು; ಹಾಗೂ ಈ ಯೋಜನೆಗೆ ಆಯವ್ಯಯದಲ್ಲಿ ಒದಗಿಸುವ ಹಣ ಎಷ್ಟು?*

ಆ) *ಹಿರೇಹಳ್ಳ ಯೋಜನೆ ವ್ಯಾಪ್ತಿಯಲ್ಲಿ ಬರುವ ಮುದ್ಲಾಪುರ ಗ್ರಾಮಕ್ಕೆ ಪುನರ್ ವಸತಿ ಕಲ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?*

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ತುಂಗಭದ್ರಾ ಯೋಜನೆಯ ತುಂಗಭದ್ರಾ ಎಡದಂಡೆ ಕಾಲುವೆ ಯೋಜನೆಯನ್ನು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭಿಸಲಾಗಿದ್ದು, ಈಗಾಗಲೇ ಇದರಡಿಯಲ್ಲಿ ಉದ್ದೇಶಿತ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಿರುವುದರಿಂದ, ಈ ಯೋಜನೆಯನ್ನು 1999-2000 ಸಾಲಿಗೆ ಅಂತಿಮಗೊಳಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ತೀರ್ಮಾನಿಸಲಾಗಿದೆ. ಆದಾಗ್ಯೂ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ ಅಭಿವೃದ್ಧಿ ಕಾಮಗಾರಿಗಳನ್ನು 2000-2001ನೇ ಸಾಲಿನಿಂದ ಹೊಸ ಶೀರ್ಷಿಕೆಯಡಿಯಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ ಹಾಗೂ ಇದಕ್ಕಾಗಿ ಬೇಕಿರುವ ಅಗತ್ಯ ಅನುದಾನವನ್ನು ಒದಗಿಸಿಕೊಳ್ಳಲು ಉದ್ದೇಶಿಸಿದೆ.

ಆ) ಹೀರೇಹಳ್ಳ ಜಲಾಶಯದ ಪುನರ್ವಸತಿ ಸಮಿತಿಯ ಶಿಫಾರಸ್ಸಿನಂತೆ ಮುದ್ದಾಪುರ ಗ್ರಾಮಕ್ಕೆ ಪುನರ್ವಸತಿ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಕಬಿನಿ ಏತ ನೀರಾವರಿ ಯೋಜನೆ ಸರ್ವೆ ಕಾರ್ಯ

815 - ಶ್ರೀ ಕೃಷ್ಣಮೂರ್ತಿ ಎ.ಆರ್ (ಸಂತೇಮಾರನಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಏತ ನೀರಾವರಿ ಯೋಜನೆ ಸರ್ವೇ ಕಾರ್ಯವು ಯಾವ ಹಂತದಲ್ಲಿದೆ. ಹಾಗೂ ಸರ್ವೇ ಕಾರ್ಯವು ಎಂದು ಪೂರ್ಣಗೊಳ್ಳುವುದು. ಸರ್ವೇ ಕಾರ್ಯಕ್ಕಾಗಿ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು?

ಆ) ಕಬಿನಿ ಏತ ನೀರಾವರಿ ಯೋಜನೆಯ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ಎಷ್ಟು 2000-1ನೇ ಸಾಲಿನ ಆಯವ್ಯದಲ್ಲಿ ಎಷ್ಟು ಹಣವನ್ನು ಈ ಯೋಜನೆಗೆ ಮಂಜೂರು ಮಾಡಲಾಗಿದೆ. ಈ ಕಾಮಗಾರಿಯನ್ನು ಎಂದು ಪ್ರಾರಂಭ ಮಾಡಲಾಗುವುದು. ಪೂರ್ಣಗೊಳ್ಳಲು ತೆಗೆದುಕೊಳ್ಳುವ ಅವಧಿ ಎಷ್ಟು?

ಇ) ಕೃಷ್ಣ ಭಾಗ್ಯ ಜಲ ನಿಗಮದಂತೆ ಕಬಿನಿ ಜಲ ನಿಗಮ ಸ್ಥಾಪನೆ ಮಾಡುವ ಉದ್ದೇಶವಿದೆಯೇ?

ಈ) ಹೊಂಗನೂರು ಹಿರಿಕೆರೆ ಏತ ನೀರಾವರಿ ಯೋಜನೆಗೆ 2000-2001ನೇ ಸಾಲಿನಲ್ಲಿ ಆಯವ್ಯಯದಲ್ಲಿ ಮಂಜೂರಾಗಿರುವ ಹಣ ಎಷ್ಟು?

ಉ) ಪ್ರಸ್ತುತ ಈ ಯೋಜನೆಯ ಕಾರ್ಯ ಯಾವ ಹಂತದಲ್ಲಿದೆ?

ಊ) ಈ ಯೋಜನೆ ಪೂರ್ಣಗೊಳ್ಳತಕ್ಕ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಕಬಿನಿ ಏತ ನೀರಾವರಿ ಯೋಜನೆಯ ಬಿದರಹಳ್ಳಿ ಏತ ನೀರಾವರಿ ಕಾಲುವೆಯ 20 ಮೀ. ಉದ್ದದ ಮುಖ್ಯ ನಾಲೆಯ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಮುಂದಿನ ಭಾಗವು ಪ್ರಗತಿಯಲ್ಲಿದೆ. ಈ ಕಾರ್ಯವನ್ನು 2000-01ನೇ ಸಾಲಿನಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಈ ಸರ್ವೆ ಕಾರ್ಯಕ್ಕಾಗಿ ರೂ.15 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

ಆ) ಕಬಿನಿ ಏತ ನೀರಾವರಿ ಯೋಜನೆಯ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ. 622.50 ಕೋಟಿಗಳು. ಈ ಕಾಮಗಾರಿಯನ್ನು 2000-01ನೇ ಸಾಲಿನಲ್ಲಿ ಪ್ರಾರಂಭ ಮಾಡಲು ಯೋಜಿಸಲಾಗಿದೆ. 3 ರಿಂದ 4 ವರ್ಷಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಇಲ್ಲ.